ಚಿಕ್ಕವಳಾಗಿದ್ದಾಗ ಅಪ್ಪನ ಈ ಕೆಲಸದ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಮೂವರು ಮಕ್ಕಳಲ್ಲಿ ನಾನೇ ಚಿಕ್ಕವಳು. ಬೆಳೆದದ್ದು ಪ್ಯಾರಿಸ್‌ನಲ್ಲಿ. ಎಲ್ಲ ಅಪ್ಪಂದಿರಂತೆ ನನ್ನಪ್ಪ ಕೂಡ ಇದ್ದ. ಒಂದೇ ವ್ಯತ್ಯಾಸ ಅಂದರೆ ಅವನು ಅಮ್ಮನಿಗಿಂತ 30 ವರ್ಷ ದೊಡ್ಡವನು. ನನ್ನ ತಾತನೇನೊ ಎನ್ನುವಷ್ಟು ದೊಡ್ಡವನು. ಅವನೊಬ್ಬ ಛಾಯಾಗ್ರಾಹಕ. ಬೀದಿ ಮಕ್ಕಳನ್ನ ಸೇರಿಸಿ ಓದು ಬರಹ ಹೇಳಿಕೊಡುತ್ತಿದ್ದ. ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಅಂತ ನಮಗೆಲ್ಲ ಹೇಳಿಕೊಡುತ್ತಿದ್ದ. ಹ್ಞಾಂ, ಅವನೆಂದೂ ತನ್ನ ಹಿಂದಿನ ಜೀವನದ ಬಗ್ಗೆ ಹೇಳುತ್ತಿರಲಿಲ್ಲ.

ನನಗೆ ಅವನ ಬಗ್ಗೆ ಅನುಮಾನ ಹುಟ್ಟುವಂತಹ ಒಂದು ಘಟನೆ ನಡೆಯಿತು. ನಾನಾಗ ಹೈಸ್ಕೂಲಿನಲ್ಲಿದ್ದೆ. ಎಂದೂ ಕಡಿಮೆ ಅಂಕ ತೆಗೆಯದ ನನಗೆ ಆ ಸಾರಿ ಕಡಿಮೆ ಅಂಕ ಬಂದಿತ್ತು. ಹಾಗಾಗಿ ಅಪ್ಪ ಅಮ್ಮಂಗೆ ಹೇಳೋದೆ ಬೇಡ ಅಂತ ಸುಮ್ಮನಿದ್ದೆ. ಆದರೆ ಸ್ಕೂಲಿನ ಅಸೈನ್ಮೆಂಟ್‌ನಲ್ಲಿ ಅವರ ಸಹಿ ಬೇಕಿತ್ತಲ್ಲ! ಏನು ಮಾಡೋದು? ನಮ್ಮಪ್ಪನ ಸಹಿಯನ್ನ ನಕಲು ಮಾಡಲು ಸಾಧ್ಯವೇ ಇರಲಿಲ್ಲ. ಹಾಗಾಗಿ ಅಮ್ಮನ ಸಹಿಯನ್ನ ಅಭ್ಯಾಸ ಮಾಡಲು ಶುರುಮಾಡಿದೆ. ಒಂದಷ್ಟು ಕಾಗದ ಇಟ್ಕೊಂಡು ಒಂದೇ ಸಮ ಸಹಿ ಮಾಡುತ್ತ ಮಾಡುತ್ತ ಅಭ್ಯಾಸ ಮಾಡಿದೆ. ಪರವಾಗಿಲ್ಲ ಅಮ್ಮನ ಸಹಿ ತರಹ ಇದೆ ಅನ್ನಿಸಿದ ತಕ್ಷಣ ಪುಸ್ತಕದಲ್ಲಿ ಸಹಿ ಮಾಡಿಬಿಟ್ಟೆ. ಆಮೇಲೆ ಅಮ್ಮ ಸ್ಕೂಲ್‌ಬ್ಯಾಗ್‌ನಲ್ಲಿ ಪುಸ್ತಕಗಳನ್ನ ನೋಡುತ್ತಿರಬೇಕಾದರೆ ಅಸೈನ್ಮೆಂಟ್ ಪುಸ್ತಕ ಸಿಕ್ಕು ನನ್ನ ಕಳ್ಳತನ ಬಯಲಾಯ್ತು. ಅದನ್ನು ನೋಡಿ ಅಮ್ಮನಿಗೆ ಸಿಕ್ಕಾಪಟ್ಟೆ ಸಿಟ್ಟು ಬಂದು ಬೈಯಲು ಶುರುಮಾಡಿದಳು. ನಾನು ರೂಂ ಒಳಗೆ ಓಡಿಹೋಗಿ ಕಂಬಳಿ ಕೆಳಗೆ ಬಚ್ಚಿಟ್ಟುಕೊಂಡುಬಿಟ್ಟೆ. ಅಪ್ಪ ಕೆಲಸದಿಂದ ಬರೋದನ್ನೇ ಕಾಯುತ್ತಾ ಕೂತಿದ್ದೆ. ಅಪ್ಪ ಒಳಗಡೆ ಬಂದ ಸದ್ದು ಕೇಳಿಸಿತು. ಕಂಬಳಿಯ ಕೆಳಗೆ ಬಚ್ಚಿಟ್ಟುಕೊಂಡಿದ್ದೆ. ಅಪ್ಪ ರೂಂ ಒಳಗೆ ಬಂದು ಮಂಚದ ತುದಿಯಲ್ಲಿ ಕೂತು ಕಂಬಳಿ ತೆಗೆದು ನನ್ನ ಮುಖ ನೋಡಿ ಜೋರಾಗಿ ನಗಲು ಶುರುಮಾಡಿದ. ನನ್ನ ಅಸೈನ್ಮೆಂಟ್ ಪುಸ್ತಕ ಕೈಲಿ ಹಿಡಿದುಕೊಂಡು ಉಕ್ಕಿ ಬರುತ್ತಿದ್ದ ನಗುವಿನೊಂದಿಗೆ, "ಸಾರಾ ಇನ್ನೂ ಚೆನ್ನಾಗಿ ಅಭ್ಯಾಸ ಮಾಡಬೇಕಿತ್ತಲ್ವಾ? ನೋಡಿಲ್ಲಿ ಎಷ್ಟು ಚಿಕ್ಕದಾಗಿ ಸಹಿ ಮಾಡಿದಿಯಾ?" ಅಂದ. ಹೌದು ಸಹಿ ತುಂಬ ಚಿಕ್ಕದಾಗಿತ್ತು!

ನಾನು ಹುಟ್ಟಿದ್ದು ಅಲ್ಜೀರಿಯಾದಲ್ಲಿ. ಅಲ್ಲಿನ ಜನ ನಮ್ಮಪ್ಪನನ್ನ 'ಮುಜಾಹಿದ್' ಅಂದರೆ 'ಯೋಧ' ಅಂತ ಕರೆಯುತ್ತಿದ್ದರು. ಆಮೇಲೆ ಫ್ರಾನ್ಸಿನಲ್ಲಿ ಅಪ್ಪನ ಹಿಂದಿನ ಜೀವನದ ಹಲವು ಕತೆಗಳನ್ನು ಕೇಳಿದೆ. ದೊಡ್ಡವರ ಮಾತುಗಳಿಗೆ ಕಿವಿಯಾನಿಸಿ ಕೂರೋದು ಬಹಳ ಖುಷಿ ಕೊಡುತ್ತಿತ್ತು. ಅವರೆಲ್ಲ ಅಪ್ಪ ಎರಡನೇ ಮಹಾಯುದ್ಧದಲ್ಲಿ, ಅಲ್ಜೀರಿಯಾದ ಯುದ್ಧಗಳಲ್ಲಿ ಕೆಲಸಮಾಡಿದ್ದ ಅಂತೆಲ್ಲ ಹೇಳುತ್ತಿದ್ದರು. ಅಪ್ಪ ಸೈನಿಕನಾಗಿರಬಹುದಾ ಅನ್ನಿಸಿತು. ಆದರೆ ನಾನು ಅಪ್ಪನನ್ನು ನೋಡಿದಮಟ್ಟಿಗೆ ಅವನೇ ಹೇಳುತ್ತಿದ್ದ ಹಾಗೆ ಅವನು ಶಾಂತಿಪ್ರಿಯ, ಅಹಿಂಸಾವಾದಿ. ಹಾಗಾಗಿ ಅವನನ್ನು ಹೆಲ್ಮೆಟ್, ಗನ್ ಜೊತೆ ಕಲ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ.

ಒಂದಿನ ಅಪ್ಪ ನಮಗೆಲ್ಲ ಫ್ರಾನ್ಸ್ ದೇಶದ ಪೌರತ್ವ ಪಡೆಯಲು ಏನೇನೋ ದಾಖಲೆಗಳನ್ನು ಹೊಂದಿಸುತ್ತಾ ಕೂತಿದ್ದ. ಆಗ ಕೆಲವು ದಾಖಲೆಗಳು ನನ್ನ ಗಮನಸೆಳೆದವು. ಅದರಲ್ಲಿ ಸೇನೆಯಿಂದ ಅಪ್ಪನಿಗೆ ಬಂದಿದ್ದ ಪತ್ರವಿತ್ತು. ಅವರು ಅಪ್ಪ ಸಲ್ಲಿಸಿದ್ದ ಗುಪ್ತಸೇವೆಗಳಿಗೆ ಅವನಿಗೆ ವಂದನೆಗಳನ್ನು ಸಲ್ಲಿಸಿದ್ದರು. 'ವ್ಹಾ! ನಮ್ಮಪ್ಪ ಗುಪ್ತಚರನಾ? ಅಂದರೆ ಜೇಮ್ಸ್ ಬಾಂಡ್' ಅನ್ನಿಸಿ ಅವನನ್ನ ಕೇಳಿದೆ; ಅವನು ಏನೂ ಹೇಳಲಿಲ್ಲ. ಒಂದಲ್ಲ ಒಂದು ದಿನ ಕೇಳಿ ವಿಷಯ ತಿಳಿದುಕೊಳ್ಳಬೇಕು ಅಂದುಕೊಂಡೆ. ಆಮೇಲೆ ಅವನ 77ನೇ ವಯಸ್ಸಿನಲ್ಲಿ, ನನ್ನ ಮಗನಿಗೆ ತಾತನಾದಾಗ ಅವನು ಹೀಗೆ ಏನೂ